ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 09–10–2019

## ಮಾಧ್ಯಮದವರ ಗಮನಕ್ಕೆ

ಅಕ್ಟೋಬರ್ 10 ರಂದು ಬೆಂಗಳೂರಿನ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ ( ಇಸ್ರೋ ) ಸಭಾ ಭವನದಲ್ಲಿ ಆಯೋಜಿಸಲಾಗಿರುವ ಪ್ರಧಾನಮಂತ್ರಿವಯವರ ಇನೋವೇಟಿವ್ ಲರ್ನಿಂಗ್ ಪ್ರೋಗ್ರಾಂ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಭದ್ರತಾ ದೃಷ್ಟಿಯ ಹಿನ್ನೆಲೆಯಲ್ಲಿ ಮಾಧ್ಯಮದವರಿಗೆ ಅವಕಾಶ ಇರುವುದಿಲ್ಲ ಎಂದು ಕಾರ್ಯಕ್ರಮದ ಆಯೋಜಕರು ತಿಳಿಸಿದ್ದಾರೆ.

**ಖಾಸಗಿ ಸುದ್ದಿ ವಾಹಿನಿಗಳಿಗೆ ದೂರದರ್ಶನದ ಮೂಲಕ ಕರ್ನಾಟಕ ವಿಧಾನ ಸಭೆಯ ಅಧಿವೇಶನದ ಕಾರ್ಯಕಲಾಪಗಳ ನೇರ ಪ್ರಸಾರದ ಸಂಪರ್ಕಕ್ಕೆ ಅವಕಾಶ**

**ಹೆಚ್ಚಿನ ವಿವರಗಳು ಕೆಳಗಿನ ಪಿ ಡಿ ಎಫ್ ಫೈಲ್ ನಲ್ಲಿ ಅಡಕವಾಗಿದೆ.**

**PROCEEDINGS OF THE KARNATAKA LEGISLATIVE ASSEMBLY SESSION PROVIDED TO PRIVATE CHANNELS LIVE BY DOORDARSHAN**

**FOR FURTHER INFORMATION PLEASE SEE PDF FILE ATTACHED BELOW**

**ಪತ್ರಿಕಾ ಪ್ರಕಟಣೆ**

## ದಸರಾ ಸ್ಥಬ್ಧಚಿತ್ರ ಬಹುಮಾನ ಪ್ರಕಟ

**ಬೆಂಗಳೂರು, ಅಕ್ಟೋಬರ್ 09 (ಕರ್ನಾಟಕ ವಾರ್ತೆ) :**

ಮೈಸೂರು ದಸರಾ ಮಹೋತ್ಸವದ ವಿಜಯದಶಮಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸ್ಥಬ್ಧಚಿತ್ರಗಳ ಪೈಕಿ ಪ್ರಥಮ ಬಹುಮಾನವನ್ನು ಚಾಮರಾಜನಗರ ಜಿಲ್ಲೆಯ ಸಂವೃದ್ಧಿ ಸಂಪತ್ತಿನ ನಡುವೆ ಹುಲಿಯ ಸಂತೃಪ್ತ ತಾಣ ಸ್ಥಬ್ಧ ಚಿತ್ರ ಪಡೆದಯಕೊಂಡಿದೆ. ಅಂತೆಯೇ, ದ್ವಿತೀಯ ಬಹುಮಾನವನ್ನು ಉತ್ತರ ಕನ್ನಡ ಜಿಲ್ಲೆಯ ಕದಂಬರ ಬನವಾಸಿ ಹಾಗೂ ತೃತೀಯ ಬಹುಮಾನವನ್ನು ತುಮಕೂರು ಜಿಲ್ಲೆಯ ನಡೆದಾಡುವ ದೇವರು ಡಾ ಶಿವಕುಮಾರ ಸ್ವಾಮಿ ಅವರ ಕುರಿತ ಸ್ಥಬ್ದ ಚಿತ್ರಗಳು ಪಡೆದಿವೆ.

ಚಿಕ್ಕಮಗಳೂರು ಜಿಲ್ಲೆಯ ಶಿಶಿಲ ಬೆಟ್ಟ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಸೌಲಭ್ಯಗಳ ಮಾಹಿತಿ ಹಾಗೂ ಶಿವಮೊಗ್ಗ ಜಿಲ್ಲೆಯ ಫಿಟ್ ಇಂಡಿಯಾ ಸ್ಥಬ್ಧಚಿತ್ರಗಳು ಸಮಾಧಾನಕರ ಬಹುಮಾನ ಪಡೆದುಕೊಂಡಿವೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ರಾಜ್ಯದಲ್ಲಿನ ಪ್ರವಾಹ ಹಾಗೂ ಬರ ಪರಿಸ್ಥಿತಿ ನಿರ್ವಹಣೆಗೆ ಸರ್ಕಾರದ ಕ್ರಮ

**ಬೆಂಗಳೂರು, ಅಕ್ಟೋಬರ್ 09 (ಕರ್ನಾಟಕ ವಾರ್ತೆ) :**

ಬರದ ಛಾಯೆಯಲ್ಲಿದ್ದ ಕರ್ನಾಟಕ ರಾಜ್ಯದಲ್ಲಿ ಆಗಸ್ಟ್ 3 ರಿಂದ 9 ರ ನಡುವೆ ಸುರಿದ ಭಾರಿ ಮಳೆ ಹಾಗೂ ಮಹಾರಾಷ್ಟ್ರ ರಾಜ್ಯದ ಅಣೆಕಟ್ಟುಗಳಿಂದ ಕೃಷ್ಣಾ ನದಿಗೆ ಭಾರಿ ಪ್ರಮಾಣದಲ್ಲಿ ನೀರು ಹರಿದ ಪರಿಣಾಮವಾಗಿ ತೀವ್ರ ಸ್ವರೂಪದ ಪ್ರವಾಹ ಪರಿಸ್ಥಿತಿ ಉಂಟಾಯಿತು. ಈ ಅವಧಿಯಲ್ಲಿ ವಾಡಿಕೆ ಸರಾಸರಿ ಮಳೆಗಿಂತ ಶೇಕಡ 279 ರಷ್ಟು ಹೆಚ್ಚು ಮಳೆ ಸುರಿದಿದ್ದು, ಇದು ಕಳೆದ 118 ವರ್ಷಗಳಲ್ಲಿಯೇ ದಾಖಲೆ ಮಳೆಯಾಗಿದೆ.

ಸರ್ಕಾರ ಹಾಗೂ ಜಿಲ್ಲಾಡಳಿತಗಳ ಪೂರ್ವ ಸಿದ್ದತೆ ಹಾಗೂ ನೆರೆಯ ರಾಜ್ಯದೊಂದಿಗೆ ಸಮನ್ವಯದಿಂದಾಗಿ ಹೆಚ್ಚಿನ ಅನಾಹುತವಾಗದಂತೆ ತಡೆಯಲಾಯಿತು. ಕೇಂದ್ರ ಸರ್ಕಾರದ ನೆರವಿನೊಂದಿಗೆ ಜನರ ಸಂಕಷ್ಟಕ್ಕೆ ತಕ್ಷಣವೇ ಸ್ಪಂದಿಸಿ ಸುಮಾರು 7 ಲಕ್ಷ ಜನರನ್ನು ಸುರಕ್ಷಿತ ಸ್ಥಳಗಿಗೆ ಸ್ಥಳಾಂತರಿಸಲಾಗಿದೆ. ಕರ್ನಾಟಕದ ಇತಿಹಾಸದಲ್ಲೇ ಅತಿ ದೊಡ್ಡವಾದ ರಕ್ಷಣಾ ಕಾರ್ಯಾಚರಣೆಯನ್ನು ಕೈಗೊಳ್ಳಲಾಗಿತ್ತು. ಎನ್‌ಡಿಆರ್‌ಎಫ್, ಸೇನಾಪಡೆಗಳು, ಎನ್‌ಡಿಆರ್‌ಎಫ್, ಕರಾವಳಿ ರಕ್ಷಣಾ ಪಡೆ, ರಾಜ್ಯ ಅಗ್ನಿಶಾಮಕದಳ, ಪೊಲೀಸರು, ಸೇನಾಪಡೆ, ಗೃಹ ರಕ್ಷಕದಳ ಮತ್ತಿತರ ತಂಡಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

- ಆಗಸ್ಟ್ 2019 ರ ಮಾಹೆಯಲ್ಲಿ ಉಂಟಾದ ಪ್ರವಾಹದಿಂದ ರೂ.35,160.81 ಕೋಟಿ ಅಂದಾಜು ಹಾನಿಯಾಗಿದ್ದು, ಪ್ರವಾಹ ಪರಿಹಾರಕ್ಕಾಗಿ ಮಾರ್ಗಸೂಚಿಯಂತೆ ರೂ.3891.80ಕೋಟಿ ಆರ್ಥಿಕ ನೆರವನ್ನು ಕೋರುತ್ತಾ ಕೇಂದ್ರ ಸರ್ಕಾರಕ್ಕೆ ಮೆಮೊರಾಂಡಮ್ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು 1200 ಕೋಟಿ ರೂ ಮಧ್ಯಂತರ ಪರಿಹಾರ ಬಿಡುಗಡೆ ಮಾಡಿದೆ.

- ಪ್ರವಾಹ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರದಿಂದ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:
    - ➢ ರಾಜ್ಯದ 22 ಜಿಲ್ಲೆಗಳ 103 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲುಕುಗಳೆಂದು ಘೋಷಿಸಲಾಗಿದೆ.
    - ➢ ಪ್ರವಾಹ ಪರಿಹಾರಕ್ಕಾಗಿ ಎಸ್‌ಡಿಆರ್‌ಎಫ್ ಅಡಿ 417.93 ಕೋಟಿ ರೂ.ಅನುದಾನ ಬಿಡುಗಡೆ ಮಾಡಲಾಗಿದೆ.
    - ➢ ನೆರೆ ಹಾವಳಿಯಿಂದ ಮನೆ ಹಾನಿಯಾದ ಬಾಧಿತ ಕುಟುಂಬಗಳಿಗೆ ಗೃಹೋಪಯೋಗಿ ಸಲಕರಣೆಗಳನ್ನು (Clothing and Utensils) ಖರೀದಿಸಲು ತಲಾ 10,000 ರೂ. ದಂತೆ ವಿಶೇಷ ಪ್ರಕರಣವೆಂದು ಅನುದಾನ ಬಿಡುಗಡೆ ಮಾಡಲಾಗಿದೆ. ಪ್ರಸ್ತುತ 203633 ಕುಟುಂಬಗಳಿಗೆ 203.63 ಕೋಟಿ ರೂ. ಅನುದಾನವನ್ನು ಪಾವತಿಸಲಾಗಿದೆ.

    - ➢ ಪ್ರವಾಹದಿಂದ ಮನೆ ಹಾನಿಯಾದ ಸಂತ್ರಸ್ಥರಿಗೆ ಕೆಳಕಂಡಂತೆ ಪರಿಹಾರ ಪಾವತಿಸಲಾಗುತ್ತಿದೆ.

| ಮನೆಹಾನಿಯ ಪ್ರಮಾಣ | ಪರಿಹಾರ ಮೊತ್ತ (ರೂ.ಗಳಲ್ಲಿ) |
|---|---|
| ಶೇ.15ರಿಂದ 25ರಷ್ಟು ಹಾನಿ | 25,000/- |
| ಶೇ.26ರಿಂದ 75ರಷ್ಟು (ತೀವ್ರ ಮನೆ ಹಾನಿ) | 1,00,000/- |
| ಶೇ.75ರಷ್ಟು ಮನೆ ಹಾನಿಯನ್ನು ಸಂಪೂರ್ಣ ಮನೆ ಹಾನಿ ಎಂದು ಪರಿಗಣಿಸಿ ಪುನರ್ ನಿರ್ಮಾಣಕ್ಕಾಗಿ. | 5,00,000/- |

    - ➢ ಸಂಪೂರ್ಣ ಹಾಗೂ ಗಂಭೀರವಾಗಿ ಮನೆ ಹಾನಿಯಾದವರಿಗೆ ಸರ್ಕಾರದ ವತಿಯಿಂದ 5.00 ಲಕ್ಷ ರೂ. ಪರಿಹಾರವನ್ನು ನೀಡಲಾಗುತ್ತಿದೆ.
    - ➢ 5.00 ಲಕ್ಷ ರೂ.ಪರಿಹಾರಕ್ಕಾಗಿ ಅರ್ಹರಾದ ಕುಟುಂಬಗಳಿಗೆ ಗರಿಷ್ಟ 10ತಿಂಗಳ ಅವಧಿಗೆ ಸೀಮಿತಗೊಳಿಸಿ ಮಾಸಿಕ 5,000/- ರೂ.ಗಳಂತೆ ಬಾಡಿಗೆ ಮೊತ್ತವನ್ನು ಅಥವಾ ಮನೆಗಳನ್ನು ಪುನರ್ ನಿರ್ಮಿಸುವವರೆಗೆ, ಯಾವುದು ಮೊದಲೋ ಅಲ್ಲಿಯವರೆಗೆ ಪಾವತಿಸಲಾಗುವುದು.

- ಪೂರ್ಣವಾಗಿ ಮನೆ ನಷ್ಟವಾಗಿರುವ ಪ್ರತಿ ಫಲಾನುಭವಿಗೆ 5.6 ಲಕ್ಷ ರೂ.ಪರಿಹಾರ ಸಿಗುತ್ತದೆ (10,000 ರೂ. ಅನಪೇಕ್ಷಿತ ಪರಿಹಾರ, 50,000 ರೂ. ಬಾಡಿಗೆ ಅಥವಾ ತಾತ್ಕಾಲಿಕ ಶೆಡ್ ನಿರ್ಮಾಣಕ್ಕೆ, 5.00 ಲಕ್ಷ ರೂ.ಮನೆ ಪುನರ್ ನಿರ್ಮಾಣಕ್ಕೆ).
- ಇದಕ್ಕಾಗಿ ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ ವತಿಯಿಂದ ತಯಾರಿಸಲಾದ ಆ್ಯಪ್ ಮೂಲಕ ಮಾಹಿತಿ ಸಂಗ್ರಹಿಸಲಾಗುತ್ತಿದ್ದು, ಮನೆ ಹಾನಿ ಪರಿಹಾರಕ್ಕಾಗಿ 1,000 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗಿದೆ.

| ಒಟ್ಟು ಹಾನಿಗೊಳಗಾದ ಮನೆಗಳಿಗೆ ಪರಿಹಾರ (08.10.2019ರವರೆಗೆ) | | | | |
|---|---|---|---|---|
| ಜಿಲ್ಲಾಧಿಕಾರಿಗಳಿಂದ ಒಟ್ಟು ಅನುಮೋದಿತ ಸಂತ್ರಸ್ಥರು | ಅನುದಾನ ಪಡೆದ ಒಟ್ಟಾರೆ ಸಂತ್ರಸ್ಥರು | | ಅನುದಾನ ಪಡೆಯಲು ಇರುವ ಬಾಕಿ ಸಂತ್ರಸ್ಥರು | ಶೇಕಡವಾರು |
| | ಒಟ್ಟು ಸಂತ್ರಸ್ಥರು | ಮೊತ್ತ (ಕೋಟಿಗಳಲ್ಲಿ) | ಅನುದಾನ ಪಡೆಯಲು ಇರುವ ಬಾಕಿ ಸಂತ್ರಸ್ಥರು | |
| 105750 | 83372 | 244.11 | 22378 | 78.84 |

| ಕ್ರ.ಸಂ | ವರ್ಗ | ಬಾಡಿಗೆ /ಶೆಡ್ ನಿರ್ಮಾಣದ ವಿವರ | |
|---|---|---|---|
| | | ಅನುದಾನ ಪಡೆದ ಒಟ್ಟು ಸಂತ್ರಸ್ಥರು | ಬಿಡುಗಡೆಗೊಳಿಸಿದ ಅನುದಾನ (ಕೋಟಿಗಳಲ್ಲಿ) |
| 1 | ಬಾಡಿಗೆ ಸಂತ್ರಸ್ಥರುಗಳಿಗೆ | 5180 | 2.59 |
| 2 | ಶೆಡ್ ನಿರ್ಮಾಣಕ್ಕಾಗಿ ಸಂತ್ರಸ್ಥರುಗಳಿಗೆ | 1761 | 8381 |
| 3 | ಶೆಡ್ ನಿರ್ಮಾಣಕ್ಕಾಗಿ | 635 | 3.18 |

| | | | |
|---|---|---|---|
| | **ಜಿಲ್ಲಾಧಿಕಾರಿಗಳಿಗೆ** | | |
| **ಒಟ್ಟು** | | **7576** | **14.58** |

- **ಪ್ರವಾಹ ಪರಿಹಾರಕ್ಕಾಗಿ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ವತಿಯಿಂದ ತುರ್ತು ಪರಿಹಾರಕ್ಕೆ 417.93 ಕೋಟಿ ರೂ.ಮತ್ತು ಮೂಲಭೂತ ಸೌಕರ್ಯಗಳ ತುರ್ತು ದುರಸ್ಥಿಗಾಗಿ 500.00 ಕೋಟಿ ರೂ., ವಸತಿ ಇಲಾಖಾ ವತಿಯಿಂದ ಮನೆಗಳ ದುರಸ್ಥಿಗಾಗಿ 1,231.00 ಕೋಟಿ ರೂ., ಲೋಕೋಪಯೋಗಿ ಇಲಾಖಾ ವತಿಯಿಂದ ಮೂಲಭೂತ ಸೌಕರ್ಯಗಳ ದುರಸ್ಥಿತಿಗಾಗಿ.500.00 ಕೋಟಿ ರೂ, ಸಣ್ಣ ನೀರಾವರಿ ಇಲಾಖೆಯಿಂದ ರೂ.300.00ಕೋಟಿ ಒಟ್ಟು 2,948.93 ಕೋಟಿ ರೂ.ಅನುದಾನ ಮಂಜೂರಾಗಿದೆ.**

## ತರಬೇತಿ ಕಾರ್ಯಕ್ರಮ

**ಬೆಂಗಳೂರು, ಅಕ್ಟೋಬರ್ 9, (ಕರ್ನಾಟಕ ವಾರ್ತೆ) :**

**ಕೇಂದ್ರ ಸರ್ಕಾರವು ಇತ್ತೀಚೆಗೆ ಕೃಷಿ ರಫ್ತು ನೀತಿಯನ್ನು ಹೊರತಂದಿದ್ದು, ಸದರಿ ನೀತಿಗೆ ಅನುಗುಣವಾಗಿ ರಾಜ್ಯದಿಂದಲೂ ಹಲವು ಕೃಷಿ ರಫ್ತು ಉತ್ತೇಜನ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ದಿಸೆಯಲ್ಲಿ ಕೃಷಿ ರಫ್ತಿಗೆ ಸಂಬಂಧಿಸಿದಂತೆ ಇರುವ ಅವಕಾಶಗಳು ಮತ್ತು ಅವಶ್ಯಕತೆಗಳ ಬಗ್ಗೆ ಮೂರು ದಿನಗಳ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತವು (ಕರ್ನಾಟಕ ಸರ್ಕಾರದ ಒಂದು ಉದ್ಯಮ) ವಿಶ್ವೇಶ್ವರಯ್ಯ ವಾಣಿಜ್ಯ ಉತ್ತೇಜನ ಕೇಂದ್ರ ಸಂಸ್ಥೆಯ (VTPC) ಸಹಯೋಗದೊಂದಿಗೆ ಆಯೋಜಿಸಲು ಉದ್ದೇಶಿಸಿದ್ದ ಕಾರ್ಯಕ್ರಮದ ವಿವರದ ನಿಂತಿದೆ.**

**ದಿನಾಂಕ: 23-10-2019 ಇಂದ 25-10-2019 ರವರೆಗೆ ವಿಶ್ವೇಶ್ವರಯ್ಯ ವಾಣಿಜ್ಯ ಉತ್ತೇಜನ ಕೇಂದ್ರ, (VTPC) ತರಬೇತಿ ಕೊಠಡಿ, ಮೂರನೇ ಮಹಡಿ, "ಎ" ಬ್ಲಾಕ್ , ಬಿ.ಎಂ.ಟಿ.ಸಿ. ಕಾಂಪ್ಲೆಕ್ಸ್, ಶಾಂತಿನಗರ, ಡಬಲ್ ರೋಡ್ ಬೆಂಗಳೂರು ಇಲ್ಲಿ ಕೃಷಿ ರಫ್ತು ಸಾಮರ್ಥ್ಯ ಮತ್ತು ಅವಕಾಶಗಳು ಹಾಗೂ ರಫ್ತು ಅವಶ್ಯಕತೆಗಳ ಕುರಿತು ತರಬೇತಿ ನಡೆಯಲಿದೆ.**

**ರಾಜ್ಯದ ರೈತರ ಗುಂಪುಗಳು, ರೈತರ ಉತ್ಪದನಾ ಸಂಸ್ಥೆಗಳು (FPO's) ಪ್ರಾಂತೀಯ ಒಕ್ಕೂಟಗಳು, ರಾಜ್ಯದ ಆಹಾರ ಪಾರ್ಕ್‌ಗಳ ಉದ್ದಿಮೆದಾರರು, ನವೋದ್ಯಮಿಗಳು, ಆಹಾರ ಸಂಸ್ಕರಣಾ ಉದ್ದಿಮೆದಾರರು, ರಫ್ತು ಉದ್ದಿಮೆದಾರರು ಪಾಲ್ಗೊಳ್ಳಬಹುದಾಗಿದೆ.**

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಜಡಿಶುಛಿಭಟಜ ಅಚಿಡಿಂಠ ಅಠಟಠಿಟಜಥ, ದೇವನಹಳ್ಳಿ ಮತ್ತು ಇನ್ನೋವ ಫುಡ್ ಪಾರ್ಕ್, ಮಾಲೂರು ಈ ಕ್ಷೇತ್ರಕ್ಕೆ ಈ ತರಬೇತಿ ಅವಧಿಯಲ್ಲಿ ಭೇಟಿ ನೀಡಲಿದೆ.

ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಕೆಪೆಕ್ ವೆಬ್ ಸೈಟ್ **www.kappec.kar.giv.in** ಸಂದರ್ಶಿಸಲು ಅಥವಾ ದೂರವಾಣಿ ಸಂಖ್ಯೆ **080–22243082**, ಮೊಬೈಲ್ ಸಂಖ್ಯೆ: **9480316528 / 9008350699** ಅನ್ನು ಸಂಪರ್ಕಿಸಲು ಕೋರಿದೆ.

# Three days training programme related to agriculture exports

Bengaluru, October 9 (Karnataka Information) :

The Government of India has brought out a new Agri Export Policy to boost the agriculture export from the country. In line with the said policy, Government of Karnataka has initiated several measures to enhance agri export from the State In this direction, Karnataka State Agricultural Produce Processing and Export Corporation Limited ( A Government of Karnataka Enterprises) in association with Visveswaraya Trade Promotion Centre (VTPC) has organized a three days training programme related to agriculture exports and details are as under.

Subject; Potential and Opportunities in Agriculture Export and Export Requirements. Date: 23-10-2019 to 25-10-2019. Place: Visvesvaraya Trade Promotion Centre (VTPC) III Floor, 'A' Block, BMTC Complex, Shantinagar, Double Road, Bengaluru- 560 027.

Who can participate : Farmer Groups, Farmer Producers organization (FPO), Regional Federations, Food Park entrepreneurs, Startups, Food Industries, Agri Exporters of Karnataka State.

Field Visit : Kempegowda International Airport Perishable Cargo Complex and Innova Food Park, Malur.

For More details interested stakeholders may visit KAPPEC website www.kappec.kar.gov.in or contact phone No.080-22243082, Mobile No. 9480316528 / 9008350699.